# ಪ್ರೀತಿಯ ಹಂಬಲದಲ್ಲಿ ಬಂಧನ–ಬಿಡುಗಡೆಗಳ ನಡುವೆ...

ವಕೀಲರು ಆರೋಪಿಸಿದರು: ‘ನಿಮ್ಮ ಹೆಂಡತಿ ಗರ್ಭಿಣಿಯಾದಾಗ, ನೀವು ಅವಳ ಬಗ್ಗೆ ಗಮನ ಕೊಡುವುದಕ್ಕೆ ಬದಲಾಗಿ, ನಿಮ್ಮ ಗೆಳೆಯರೊಂದಿಗೆ ಮೋಜು–ಮಸ್ತಿ ಮಾಡುತ್ತಿದ್ದಿರಿ. ಮಕ್ಕಳ ಜನನದ ನಂತರ ನೀವು ನಿಮ್ಮ ಹೆಂಡತಿಯೊಂದಿಗೆ ಬೆಡ್‌ರೂಮಿನಲ್ಲಿ ಮಲಗುವುದನ್ನು ನಿಲ್ಲಿಸಿದ್ದಿರಿ. ನೀವು ಆರಾಮಾಗಿ ಸ್ಟಡಿ ರೂಮಿನ ಸೋಫಾದಲ್ಲಿ ಮಲಗಿ ಎಂಟು ಗಂಟೆಗಳ ಕಾಲ ನಿದ್ರೆಯನ್ನು ಮಾಡುತ್ತಿದ್ದಿರಿ; ನಿಮ್ಮ ಹೆಂಡತಿಗೆ ಆಪರೇಷನ್ ಮಾಡಿ ಮಕ್ಕಳನ್ನು ಹೊರತೆಗೆಯಲಾಗಿತ್ತು, ಅವಳು ಪೋಸ್ಟ್‌ನ್ಯಾಟಲ್ ಡಿಪ್ರೆಶನ್‌ನಲ್ಲಿದ್ದು, ರಾತ್ರಿಯಿಡೀ ಒಬ್ಬಳೇ ಮಕ್ಕಳೊಂದಿಗೆ ಸೆಣಸಾಡುತ್ತಿದ್ದಳು. ಆಪರೇಷನ್ ಗಾಯ ಮಾಗಿರಲಿಲ್ಲ. ನೀವು ಆಗ ಗಂಡ ಹಾಗೂ ತಂದೆಯ ಜವಾಬ್ದಾರಿಯನ್ನು ಯಾವುದೇ ರೀತಿಯಲ್ಲಿ ನಿರ್ವಹಿಸಲಿಲ್ಲ. ಮಕ್ಕಳ ಭಾರವನ್ನೆಲ್ಲಾ ಹೆಂಡತಿಯ ಮೇಲೆ ಹಾಕಿದಿರಿ. ಹೆಂಡತಿಗೆ ಸಿಟ್ಟು ಬಂದಾಗ, ಅವಳನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಬದಲಾಗಿ ಅವಳ ಬಗ್ಗೆಯೇ ನೀವು ಕಿರುಚಾಡುತ್ತಿದ್ದಿರಿ. ಅವಳಿಗೆ ಪ್ರೀತಿ ಮತ್ತು ಸ್ನೇಹವನ್ನು ತೋರಲಿಲ್ಲ. ಕಡೆಗೊಂದು ದಿನ ಅಕಸ್ಮಾತ್ ಮನೆಯಿಂದ ಮಾಯವಾದಿರಿ.’

ಅಯ್ಯೋ ದೇವರೇ! ನಾನು ನನ್ನ ತಲೆ ಹಿಡಿದು ಕೂತೆ. ನಾನು ಬೆಳಿಗ್ಗೆಯಿಂದ ರಾತ್ರಿಯವರೆಗೆ ದುಡಿಯುತ್ತಿರುವುದು ಈ ಹೆಣ್ಣಿನ ಗಮನಕ್ಕೇ ಬರಲಿಲ್ಲವೇ! ನಾನು ನನ್ನ ಹೇಳಿಕೆಯಲ್ಲಿ ಸ್ಪಷ್ಟಪಡಿಸಿದೆ, ‘ಒಂದು ವೇಳೆ ನಾನು ಸಹ ರಾತ್ರಿಯಿಡೀ ಎಚ್ಚರವಾಗಿದ್ದರೆ, ಮನೆಯ ಒಳಗಿನ ಹೊರಗಿನ ಕೆಲಸಗಳನ್ನು ಯಾರು ಮಾಡುತ್ತಿದ್ದರು? ಬೆಳಿಗ್ಗೆ ಐದರಿಂದ ರಾತ್ರಿ ಹನ್ನೊಂದರವರೆಗೆ ಅಡುಗೆ ಮಾಡುವುದು, ಮನೆಯನ್ನು ಸ್ವಚ್ಛಗೊಳಿಸುವುದು, ಬಟ್ಟೆ ಒಗೆಯುವುದು, ಪೇಟೆಯಿಂದ ಸಾಮಾನುಗಳನ್ನು ತರುವುದು, ನನ್ನ ಕೆಲಸಕ್ಕೆ ಹೋಗುವುದು... ಇಷ್ಟೆಲ್ಲಾ ಮಾಡಿದ ನಂತರ ರಾತ್ರಿ ನಿದ್ರೆಯನ್ನೂ ಮಾಡಬಾರದೇ?’

‘ನೀವೇಕೆ ದಾದಿಯನ್ನಿಟ್ಟುಕೊಂಡಿಲ್ಲ?’

‘ನಾನೊಬ್ಬ ಶಾಲಾ ಅಧ್ಯಾಪಕ. ದಾದಿಯನ್ನು ನೇಮಿಸಿಕೊಳ್ಳುವಷ್ಟು ಸಾಮರ್ಥ್ಯವಿಲ್ಲ. ಸೌಂದ್ರಾ ಸಹ ಪ್ರೆಗ್ನೆನ್ಸಿಯ ಸಮಯದಲ್ಲಿ ಆರೋಗ್ಯ ಹದಗೆಟ್ಟಿದ್ದರಿಂದ ತನ್ನ ನೌಕರಿಯನ್ನು ಬಿಟ್ಟಿದ್ದಳು. ಮನೆಯ ಖರ್ಚಿನ ಹೊಣೆ ನನ್ನ ಮೇಲೆ ಬಿದ್ದಿತ್ತು, ಅದಕ್ಕಾಗಿ ಮೇಲು ಸಂಪಾದನೆಗಾಗಿ ಒಂದು ರಿಸರ್ಚ್ ಕಂಪನಿಯಲ್ಲಿ ಪ್ರೂಫ್‌ರೀಡಿಂಗ್ ಕೆಲಸವನ್ನೂ ಮಾಡುತ್ತಿದ್ದೆ.’

‘ನೀವು ನಿಮ್ಮ ಹೆಂಡತಿಗೆ ಯಾವ ವಿಷಯವನ್ನು ಸಹ ತಿಳಿಸದೆ ಕಣ್ಮರೆಯಾದಿರಿ! ಮಕ್ಕಳ ಜವಾಬ್ದಾರಿ ನಿಮ್ಮ ಹೆಂಡತಿಯದು ಮಾತ್ರವೇ?’

‘ನಾನು ಡೈನಿಂಗ್ ಟೇಬಲ್ ಮೇಲೆ ನೋಟ್ ಇಟ್ಟಿದ್ದೆ...’

ವಕೀಲರು ನನ್ನನ್ನು ಮಧ್ಯದಲ್ಲಿಯೇ ತಡೆದು ಹೇಳಿದರು, ‘ನಿಮ್ಮ ಹೆಂಡತಿ ಯಾವುದೇ ನೋಟ್ ನೋಡಲಿಲ್ಲ. ಅವರು ನಿಮ್ಮನ್ನು ಹುಡುಕುತ್ತಿದ್ದರು, ಸ್ನೇಹಿತರು ಮತ್ತು ಸಂಬಂಧಿಕರಿಗೆ ಫೋನ್ ಮಾಡಿದರು. ನೀವು ದುರ್ಘಟನೆಗೆ ಬಲಿಯಾದಿರಿ, ನಿಮಗೆ ಆಕ್ಸಿಡೆಂಟ್ ಆಯಿತು ಎಂಬ ಭಯ ಸಹ ಅವರಿಗಿತ್ತು!’

ಇಂಥ ಪ್ರಶ್ನೆಗಳನ್ನು ಕೇಳಲಾಗುತ್ತದೆ ಎಂಬುದು ನನಗೆ ತಿಳಿದಿತ್ತು, ಹೀಗಾಗಿ ನನ್ನ ಸಿದ್ಧತೆಯೊಂದಿಗೆ ನಾನು ಬಂದಿದ್ದೆ. ನಾನು ಸೌಂದ್ರಾಳ ಬ್ಯಾಂಕ್ ಅಕೌಂಟಿಗೆ ಪ್ರತಿ ಹದಿನೈದು ದಿನಗಳಿಗೊಮ್ಮೆ ಹಣವನ್ನು ಟ್ರಾನ್ಸ್‌ಫರ್ ಮಾಡುತ್ತಿದ್ದೆ, ಅದರ ಮಾಹಿತಿಯನ್ನು ವಕೀಲರ ಎದುರು ಚಾಚುತ್ತಾ ಹೇಳಿದೆ, ‘ಈ ಹಣವನ್ನು ನಿಮ್ಮ ಕಕ್ಷಿದಾರರ ಅಕೌಂಟಿಗೆ ನನ್ನ ಭೂತ ಹಾಕುತ್ತಿತ್ತೆ?’

ನ್ಯಾಯಾಧೀಶರೊಂದಿಗೆ ಎಲ್ಲರೂ ಕಿಲಕಿಲನೆ ನಕ್ಕರು.

ಸೌಂದ್ರಾಳ ವಕೀಲರು ಸೌಂದ್ರಾಳ ಕೇಸನ್ನು ಮಾರ್ಮಿಕವಾಗಿದೆ ಎಂದು ಹೇಳಿ ಎಲ್ಲರ ಸಹಾನುಭೂತಿಯನ್ನು ಗಳಿಸಲು ಬಯಸುತ್ತಿದ್ದರು, ‘ಸ್ಕಾಟ್ಲೆಂಡ್‌ನಲ್ಲಿ ಜನನ ಪ್ರಮಾಣ ಕಡಿಮೆಯಾಗಿದೆ, ಹೀಗಿರುವಾಗ ತಮ್ಮ ಕಕ್ಷಿದಾರರು ಒಮ್ಮೆಲೆ ಇಬ್ಬರು ಮಕ್ಕಳನ್ನು ಹೆತ್ತು ದೇಶದ ಜನಸಂಖ್ಯೆಯ ವೃದ್ಧಿಯಲ್ಲಿ ತಮ್ಮ ಮಹತ್ವದ ಕೊಡುಗೆಯನ್ನು ಕೊಟ್ಟಿದ್ದಾರೆ, ದೇಶಕ್ಕೆ ಪರೋಪಕಾರ ಮಾಡಿದ್ದಾರೆ. ಆದರೆ ಬಡಪಾಯಿ ಸೌಂದ್ರಾಗೆ ಮಾತೃತ್ವ ವರದಾನವಾಗದೆ ಶಾಪವಾಯಿತು. ಪ್ರಸವ ಮತ್ತು ಸ್ತನಪಾನದಿಂದಾಗಿ ಅವಳ ಶರೀರದ ಕೋಮಲ ಅಂಗಗಳು ಗಾಯದಿಂದಾಗಿ ರಕ್ತವನ್ನು ಒಸರುತ್ತಿದ್ದವು, ಆದರೆ ಅವಳ ಪತಿಗೆ ಅದರ ಬಗ್ಗೆ ಚಿಂತೆಯಿರಲಿಲ್ಲ. ಅವನೆಷ್ಟು ಕ್ರೂರಿ! ಮೈ ಲಾರ್ಡ್! ಮಿಸ್ಟರ್ ಸ್ಕಾಟ್ ಓರ್ವ ಅಲೆಮಾರಿ ಮನುಷ್ಯ, ಇವನಿಗೆ ಹೆಂಡತಿ ಮತ್ತು ಮಕ್ಕಳ ಚಿಂತೆಯಿಲ್ಲ. ಇದು ನಮ್ಮ ಒಬ್ಬರು ಸಾಕ್ಷಿಗಳ ಹೇಳಿಕೆಯಿಂದ ಸಾಬೀತಾಗುತ್ತದೆ...’

ಫಿಯೋನಾ ಸೌಂದ್ರಾಳ ಅಂತರಂಗದ ಗೆಳತಿಯಾಗಿದ್ದಳು, ನಾನು ಸಹ ಅವಳನ್ನು ಅನೇಕ ಬಾರಿ ಭೇಟಿಯಾಗಿದ್ದೆ, ಅನೇಕ ಸಂದರ್ಭಗಳಲ್ಲಿ ಅವಳಿಗೆ ಸಹಾಯವನ್ನು ಸಹ ಮಾಡಿದ್ದೆ; ಫಿಯೋನಾ ನನ್ನ ವಿರುದ್ಧ ಸಾಕ್ಷಿ ಹೇಳಲು ಬಂದಿದ್ದಳು. ಅವಳು ಕಟಕಟೆಯಲ್ಲಿ ನಿಂತಾಗ, ಅವಳನ್ನು ನಾನು ದುರುಗುಟ್ಟಿ ನೋಡಿದೆ. ಅವಳು ಗಾಬರಿಗೊಂಡಳು, ಸ್ವಲ್ಪ ನರ್ವಸ್ ಸಹ ಆದಳು. ಅವಳು ಆಸರೆಗಾಗಿ ಕಟಕಟೆಯನ್ನು ಹಿಡಿದುಕೊಂಡಳು. ಆದರೆ ಅವಳು ಮಾತನಾಡಲು ಪ್ರಾರಂಭಿಸಿದಾಗ, ಬಹಿರಂಗವಾಗಿ ನನ್ನ ಮೇಲೆ ಆರೋಪವನ್ನು ಹೊರಿಸಿದಳು, ‘ಮೈ ಲಾರ್ಡ್, ಸೌಂದ್ರಾ ಮದುವೆಯಾದ ನಂತರ, ಒಂದು ದಿನ ಮಿಸ್ಟರ್ ಸ್ಕಾಟ್ ಮನೆಯಿಂದ ಓಡಿ ಹೋದರು, ಅವರು ಇಡೀ ದಿನ ಮನೆಗೆ ಬರಲಿಲ್ಲ. ಅವರ ಹೆಂಡತಿ ಸೌಂದ್ರಾ ತುಂಬಾ ಹೆದರಿಕೊಂಡು ನನಗೆ ಫೋನ್ ಮಾಡಿದರು. ಅವರನ್ನು ಎಲ್ಲಾ ಕಡೆಗಳಲ್ಲಿ ಹುಡುಕಿದರು, ಕಡೆಗೆ ನಾವು ಸೋತು ಪೊಲೀಸರಿಗೆ ಅವರು ತಪ್ಪಿಸಿಕೊಂಡಿರುವ ಬಗ್ಗೆ ರಿಪೋರ್ಟ್ ಸಹ ಬರೆಸಬೇಕಾಯಿತು. ಸೌಂದ್ರಾ ತಮ್ಮ ಪತಿ ಮಿಸ್ಟರ್ ಸ್ಕಾಟ್‌ರನ್ನು ಹುಡುಕುತ್ತಿರುವಾಗ, ಮಿಸ್ಟರ್ ಸ್ಕಾಟ್ ತಮ್ಮ ಬೀದಿ ಗೆಳೆಯರೊಂದಿಗೆ ಹರಟೆ ಹೊಡೆಯುತ್ತಿದ್ದರು. ಅವರೊಬ್ಬ ತುಂಬಾ ಬೇಜವಾಬ್ದಾರಿ ವ್ಯಕ್ತಿಯಾಗಿದ್ದಾರೆ. ಅವರಿಗೆ ಹೆಂಡತಿಯ ಭಾವನೆಗಳು ಮತ್ತು ಅವಳ

